ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ದಿಃ24/10/2016 ಪಿ.ಡಬ್ಲ್ಯೂ.1

ಸಾಕ್ಷಿ ಇಂದು ಸಾಕ್ಷಿ ಕಟ್ಟೆಯಲ್ಲಿ ನಿಂತು ತಮ್ಮ ಮುಖ್ಯ ವಿಚಾರಣೆಯ ಭಾಗವನ್ನು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ ಹಾಗೂ ಅದರಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿವೆ ಹಾಗೂ ಅದರಲ್ಲಿರುವ ಸಹಿ ತನ್ನದೆ ಎಂದು ಹೇಳಿರುತ್ತಾರೆ

ಮುಂದುವರೆದು ಮುಖ್ಯ ವಿಚಾರಣೆ ಃ ಶ್ರೀ.ಸಿ.ವಿ.ಎನ್.ವಕೀಲರಿಂದ

ದಾವಾ ಸ್ವತ್ತಿನ ಸಂಬಂಧ ಎರಡು ದೃಡೀಕೃತ ಪಹಣಿಯ ನಕಲುಗಳನ್ನು ಹಾಜರು ಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿಪಿ-1 ಮತ್ತು 2 ಎಂದು ಗುರ್ತಿಸಲಾಯಿತು. ವಾದಿ 1 ಹಾಗೂ 2ರವರು ಪ್ರತಿವಾದಿಯ ಪರವಾಗಿ ಬರೆದುಕೊಟ್ಟಿರುವ ಸಾಮಾನ್ಯ ಅಧಿಕಾರ ಪತ್ರದ ದೃಡೀಕೃತ ನಕಲು ಹಾಜರು ಪಡಿಸಿದ್ದೇನೆ. ಮೂಲ ದಾಖಲಾತಿ ಪ್ರತಿವಾದಿಯ ಬಳಿ ಇದೆ. ಅಧಿಕಾರ ಪತ್ರದ ದೃಡೀಕೃತ ನಕಲನ್ನು ನಿಪಿ-3 ಎಂದು ಗುರ್ತಿಸಲಾಯಿತು. ದಾವಾ ಸ್ವತ್ತಿನ ಸಂಬಂಧ ಒಂದು ಹಕ್ಕು ಬದಲಾವಣೆ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ-4 ಎಂದು ಗುರ್ತಿಸಲಾಯಿತು. ಒಂದು ಕಂದಾಯ ರಶೀತಿಯನ್ನು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ-5 ಎಂದು ಗುರ್ತಿಸಲಾಯಿತು. ನಾನು ನನ್ನ ವಕೀಲರ ಮೂಲಕ ನೀಡಿದ ನೋಟೀಸು ಉಪ-ನೊಂದಾಣಾಧಿಕಾರಿ, ಅರಕಲಗೂಡು ಹಾಗೂ ಪ್ರತಿವಾದಿಗೆ ಖುದ್ದು ಜಾರಿಯಾಗಿರುವ ಬಗ್ಗೆ ಎರಡು ಅಂಚೆ ಸ್ವೀಕೃತಿ ಪತ್ರಗಳನ್ನು ಹಾಜರು ಪಡಿಸಿದ್ದೇನೆ. ಅವುಗಳನ್ನು ನಿಪಿ-6 ಮತ್ತು 7 ಎಂದು ಗುರ್ತಿಸಲಾಯಿತು. ನನ್ನ ವಕೀಲರ ಮೂಲಕ ಪ್ರತಿವಾದಿಗೆ ಹಾಗೂ ಇತರರಿಗೆ ನೋಟೀಸು ನೀಡಿದ ಬಗ್ಗೆ ಕಛೇರಿಯ ನೋಟೀಸಿನ ನಕಲು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ-8 ಎಂದು ಗುರ್ತಿಸಲಾಯಿತು. ದಿಃ01/03/2016ರ ಸಾಮಾನ್ಯ ಅಧಿಕಾರ ಪತ್ರದ ಮೂಲ ರದ್ದಿಯಾತಿ ಪತ್ರ ಹಾಜರು ಪಡಿಸಿದ್ದೇನೆ. ಅದನ್ನು ನಿಪಿ-9 ಎಂದು

ಗುರ್ತಿಸಲಾಯಿತು. ನಿಪಿ-9ನ್ನು ಬರೆದುಕೊಡುವ ಮೊದಲು ನಿಪಿ-3ರ ಸಾಕ್ಷಿದಾರರಿಗೆ ಹಾಗೂ ಪಕ್ಷಗಾರರು ಉಪ-ನೊಂದಾಣಾಧಿಕಾರಿಗೆ ನೋಟೀಸು ನೀಡಿದ್ದು, ಆರು ಅಂಚೆ ರಶೀತಿಗಳನ್ನು ಹಾಜರು ಪಡಿಸಿದ್ದೇನೆ. ಅವುಗಳನ್ನು ನಿಪಿ-10 ರಿಂದ 15 ಎಂದು ಗುರ್ತಿಸಲಾಯಿತು. ಐದು ಅಂಚೆ ಸ್ವೀಕೃತಿ ಪತ್ರಗಳನ್ನು ಹಾಜರು ಪಡಿಸಿದ್ದೇನೆ. ಅವುಗಳನ್ನು ನಿಪಿ-16 ರಿಂದ 20 ಎಂದು ಗುರ್ತಿಸಲಾಯಿತು. ಆದುದರಿಂದ ದಾವೆಯಲ್ಲಿ ಕೋರಿರುವಂತೆ ಡಿಕ್ರಿಯಾಗಬೇಕೆಂದು ಕೋರುತ್ತೇನೆ.

ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿರುತ್ತಾರೆ, ಸಕಾರಣ ಇಲ್ಲದ ಕಾರಣ ಕಾಲಾವಕಾಶ ನೀಡಲು ನಿರಾಕರಿಸಿದೆ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇದೆ.

ವ್ಯವಹಾರ ನ್ಯಾಯಾಧೀಶರು, ಅರಕಲಗೂಡು.